**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.856/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಮಹಾದೇವ ಎಲ್ ಯಲಿಗಾರ | ಪಿಡಬ್ಲ್ಯೂ | 14 |
| ತಂದೆಃಗಂಡನ ಹೆಸರು | : | ಲಕ್ಷ್ಮಣ | ಸಿಡಬ್ಲ್ಯೂ | 13 |
| ವಯಸ್ಸು | : | 49 ವರ್ಷ | | |
| ಉದ್ಯೋಗ | : | ಪಿ.ಎಸ್.ಐ, ಡಿ ಸಿ ಆರ್ ಬಿ ಧಾರವಾಡ | | |
| ವಾಸ ಸ್ಥಳ | : | ಧಾರವಾಡ | | |

**ದಿನಾಂಕ:18-07-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು ಆಡೂರು ಠಾಣೆಯಲ್ಲಿ ಜನವರಿ 2015 ರಿಂದ 2016 ಮಾರ್ಚ್ ವರೆಗೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ13-06-2016 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ-11 ರವರು ಠಾಣೆಗೆ ಹಾಜರಾಗಿ ನೀಡಿದ ದಸ್ತೂರು ಲಿಖಿತ ದೂರನ್ನು ನೀಡಿದ್ದು, ಅದರ ಆಧಾರದ ಮೇಲೆ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 95/2016 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ಅದು ನಿಪಿ.2 ಎಂದು ಗುರುತಿಸಲಾಗಿದೆ, ಸದರಿಯವರ ಸಹಿಗಳನ್ನು ನಿಪಿ 2(ಬಿ) ಮತ್ತು ನಿ ಪಿ 2(ಸಿ) ಎಂದು ಗುರುತಿಲಾಯಿತು. ಆ ಪ್ರ.ವ ವರದಿಯನ್ನು ಈಗ ನೋಡುತ್ತಿದ್ದು, ನಿಪಿ 5 ಎಂದು ಗುರುತಿಲಾಯಿತು. ಸದರಿಯವರ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಲಾಯಿತು. ದಿಃ14-06-2016 ರಂದು ಚಾಸಾ-5 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತು

3 ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ಗಂಟೆ ಸಮಯದವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಆ ಪಂಚನಾಮೆಯನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ, ಸದರಿಯವರ ಸಹಿಯನ್ನು ನಿ ಪಿ 1(ಡಿ) ಎಂದು ಗುರುತಿಲಾಯಿತು. ಆ ಸಂದರ್ಭದಲ್ಲಿ ಕೃತ್ಯಕ್ಕೆ ಬಳಸಿದ ಒಂದು ಬಿದರಿನ ಕೋಲು ಮತ್ತು ಬಡಿಗೆಯನ್ನು ಜಪ್ತು ಮಾಡಿರುತ್ತೇನೆ. ಆ ಬಿದರಿನ ಕೋಲು ಮತ್ತು ಬಡಿಗೆಯನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ-1 ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-4 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಆರ್ ಯು ಪಿ ವಕೀಲರಿಂದಃ</u>**

ಆ ದಿನ ಚಾಸಾ-2 ಮತ್ತು 3 ರವರನ್ನು ನಾನೇ ಸ್ಥಳಕ್ಕೆ ಕರೆಸಿದೆನು. ಅವರುಗಳು ಆ ಸ್ಥಳದ ಅಕ್ಕಪಕ್ಕದಲ್ಲಿಯೇ ಇದ್ದರು. ಸ್ಥಳ ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಜಾವೋಜಿ ಎಂಬುವವರು ಬರೆದರು. ಆ ಪಂಚನಾಮೆ ಬರೆಯಲು ಚಾಸಾ-2 ಮತ್ತು 3 ರವರ ಮಾಹಿತಿ ನೀಡಿದರು. ಆ ದಿನ ಚಾಸಾ-2 ಮತ್ತು 3 ರವರನ್ನು ನಾನೇ ಸ್ಥಳಕ್ಕೆ ಕರೆಸಿದ್ದು, ಅವರುಗಳು ಮಾಹಿತಿ ನೀಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪಂಚರು ಆ ಸ್ಥಳದಲ್ಲಿ ಇರಲಿಲ್ಲ ಮತ್ತು ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಆ ಸ್ಥಳ ಪಂಚನಾಮೆ ಆದ ನಂತರ ಚಾಸಾ-4 ರಿಂದ 11 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-11 ರವರ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡೆನು. ನಾನು ಚಾಸಾ-4 ರಿಂದ 11 ರವರ ಹೇಳಿಕೆ ಪಡೆದುಕೊಂಡೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಚಾಸಾ-1 ರವರ ಮರು ಹೇಳಿಕೆ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈ ಕೇಸಿಗೆ ಸಂಬಂದಪಟ್ಟಂತೆ ಸರಿಯಾದ ತನಿಖೆ ನಡೆಸದೇ ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರು ಚಾವಸಾ-1 ರವರ ಜೊತೇ ಮಿಲಾಪಿಯಾಗಿ ಸೃಷ್ಟಿಸಿದ ದೂರಿನ ಆದಾರದ ಮೇಲೆ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಎರಡು ಬಡಿಗೆಗಳನ್ನು ಮಾತ್ರ ಜಪ್ತು ಮಾಡಿರುತ್ತೇನೆ . ಆ ದಿನ ಆ ಬಡಿಗೆಗಳನ್ನು ಜಪ್ತು ಮಾಡಿದ್ದೇನೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಬಡಿಗೆಗಳು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮುದ್ದೆಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ